'ಅದಕ್ಕೆ ಹೆಂಡತಿಗೆ ಹೊಡೆಯೋದೆ? ಆದದ್ದು ಆಯ್ತು. ಈಗ ಹೋಗಿ ನೀನೇ ಕರ್‍ಕೊಂಡು ಬಾ.'

'ಹಾಗೆ ಸರಳವಾಗಿ ಅವ್ಳು ಬರೋದಿಲ್ಲ. ಅದಕ್ಕೆ ಒಂದು ಚಿನ್ನದ ಸರ ಕೊಂಡ್ಕೊಂಡು ಹೋಗಿ ತೋರಿಸಿ ಕರ್‍ಕೊಂಡು ಬರ್‌ಬೇಕಂತ ಮಾಡಿದ್ದೀನಿ' ಮಧು ಮತ್ತೆ ತಲೆ ಕರೆದುಕೊಳ್ಳತೊಡಗಿದ.

ನಾನು ಯೋಚನೆ ಮಾಡತೊಡಗಿದೆ. ಮಧುನ ಮಂಡನೆಯಂತೆ ನನಗೂ ಮಂಡಿಸಲು ಏನಾದರೂ ವಿಷಯ ಸಿಗಬಹುದೇ ಎಂದು.

'ಇದೊಂದು ಬಾರಿ ಉಪಕಾರ ಮಾಡಿ, ನಿಮ್ಮ ಸಾಲ ಆದಷ್ಟು ಬೇಗ ತೀರಿಸ್ತೀನಿ.'

'ಸಾಲದ ಮಾತು ಬಿಡಪ್ಪ, ಇವತ್ತು ಕೊಂಡು ಕೊಂಡ ಚೈನು ನಾಳೆ ಸಾರಾಯಿ ಅಂಗಡಿ ಅಡಮಾನಕ್ಕೆ ಹೋಗೋದಿಲ್ಲ ಅಂತ ಹೇಗೆ ಹೇಳ್ತಿ?'

'ಇಲ್ಲ... ಇಲ್ಲ... ಅದನ್ನೂ ನಾನು ನಿರ್ಧರಿಸಿದ್ದೇನೆ. ನನ್ನ ಹೆಂಡ್ತಿ ಆ ಚೈನು ನಿಮ್ಮ ಹೆಂಡತಿಯ ಹತ್ತಿರ ತಂದಿಡ್ತಾಳೆ.'

'ನನ್ನ ಹೆಂಡತಿಯ ಹತ್ತಿರ?'

'ಹೌದು... ಯಾಕಂದ್ರೆ ನಾವಿಬ್ರೂ ಕೆಲಸಕ್ಕೆ ಹೋಗ್ತೀವಿ. ಮನೇಲಿ ಯಾರೂ ಇರೋದಿಲ್ಲ. ಹೊತ್ತು ಗೊತ್ತು ಹೇಳಿ ಬರುವುದಿಲ್ಲ' ಮಧು ಹೇಳಿದ.

'ಹಾಗಿದ್ದರೆ ಅವಳಿಗೇಕೆ ಬೇಕು ಚೈನು?'

'ನನಗೆ ಶಿಕ್ಷೆ ನೀಡಲು' ಮಧು ನಕ್ಕ.

ಮತ್ತೆ ಐದುನೂರು ಕೈಬಿಟ್ಟು ಹೋಯಿತು. ದುಡ್ಡು ಎಣಿಸುವಾಗ ಅವನೇ ಕೇಳಿದ 'ವೈನಿ ಎಲ್ಲಿ?'

'ನಿನಗೆ ಚಹ ಕೊಡಲಿಲ್ಲವೆಂದಾಗಲೇ ನೀನು ಊಹಿಸಬೇಕಾಗಿತ್ತು. ಅವಳೂ ತವರು ಮನೆಗೆ ಹೋಗಿದ್ದಾಳೆ.'

'ಸಹಜವಾಗಿ ಹೋಗಿದ್ದಾರಲ್ವೆ?'

'ನಿಜ ಹೇಳಲೆ ಮಧು, ನಿನ್ನ ಹೆಂಡತಿಯಂತೆಯೇ ನನ್ನ ಹೆಂಡತಿಯೂ ತವರು ಮನೆಗೆ ಹೋಗಿದ್ದಾಳೆ.'

'ಹಂಗಾದ್ರೆ ನನಗೆ ಈ ದುಡ್ಡು ಬೇಡ.'

'ಅವಳೇನು ಚೈನು ಕೊಡಲಿಲ್ಲ ಅಂತ ಹೋಗಿಲ್ಲ. ನಾನು ಅವಳನ್ನು ಸೆರೆ ಕುಡಿದು ಬಂದು ಹೊಡೆಯಲೂ ಇಲ್ಲ.'

ಮಧು ನಗುತ್ತ ಹೊರಟು ಹೋದ.

ಎರಡನೆಯ ದಿನ ರಾತ್ರಿ ಬಾಗಿಲು ತೆರೆದು ನೋಡಿದಾಗ ಮನೆಯ ದೃಶ್ಯ ಬದಲಾಗಿತ್ತು. ಗೂಟದ ಮೇಲಿನ ಕೊಳೆ ಬಟ್ಟೆಗಳು ಇರಲಿಲ್ಲ. ಮನೆಯನ್ನು ಸ್ವಚ್ಛಗೊಳಿಸಲಾಗಿತ್ತು. ನಿಶ್ಚಿತವಾಗಿ ರೇವತಿ ಬಂದಿದ್ದಳು. ಬಂದು ಹೋಗಿದ್ದಳು. ಮೇಜಿನ ಮೇಲೆ ಅಡಿಗೆ ಮಾಡಿಟ್ಟ ಪಾತ್ರೆಗಳು, ಎರಡು ಊಟದ ತಟ್ಟೆಗಳು. ಅವಳು ಮಧುನ ಮನೆಗೆ ಹೋಗಿ ಕುಳಿತಿರಬಹುದೆಂದು ಅನಿಸಿತು.

ಅವಸರವಸರವಾಗಿ ಹೊರಟು ನಿಂತಾಗ ಬಾಗಿಲಲ್ಲಿ ರೇವತಿ ನಿಂತಿದ್ದಳು.

ನಾನು ಊಟ ಮಾಡಿ ಬಂದಿದ್ದೆ. ಆದರೂ ನಗುತ್ತ ಹೇಳಿದೆ, 'ನಿನ್ನ ಕೈ ಊಟ ಮಾಡಲೆಂದೇ ಹಸಿವು ಉಂಟಾಗಿದೆ'.

ರೇವತಿ ನಗುತ್ತ ಮುಂದೆ ನಡೆದಳು... ನಿಜಕ್ಕೂ ರೇವತಿ ಎಲ್ಲರಿಗಿಂತ ಭಿನ್ನ. ಅವಳು ನನ್ನ ಮೇಲೆ ಕೋಪಿಸಬಹುದು, ಬಡಬಡಿಸಬಹುದು ಆದರೆ ಎಂದೂ ಅವಳು ನನ್ನಿಂದ ದೂರ ಇರಲಾರಳು.

ಊಟ ಮಾಡುವಾಗ ಅವಳು ಕೇಳಿದಳು.

'ನಾಳೆಯಿಂದ ರಜೆ ತೆಗೆದುಕೊಂಡಿದ್ದೀರಲ್ಲ?'